ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ವಿಜಯಪುರ.

ನಂ:ಆಡಳಿತ: 10879/2026. **ದಿನಾಂಕ:** 10/09/2026

ಸಾರ್ವಜನಿಕ ಟೆಂಡರ್ ಪ್ರಕಟಣೆ

ಈ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ, ಮುದ್ದೇಬಿಹಾಳ ನ್ಯಾಯಾಲಯ ಆವರಣದಲ್ಲಿರುವ 45.00 ಚದರ ಮೀಟರ್ ವಿಸ್ತೀರ್ಣದ ನೆಲ ಅಂತಸ್ತಿನ ಕಟ್ಟಡವನ್ನು ಕ್ಯಾಂಟೀನ್ ನಡೆಸುವ ಉದ್ದೇಶಕ್ಕಾಗಿ ಬಾಡಿಗೆ ಆಧಾರದ ಮೇಲೆ ನೀಡಲಾಗುವುದು. ಈ ಸಂಬಂಧ ಆಸಕ್ತ ಹಾಗೂ ಅರ್ಹ ಅರ್ಜಿದಾರರಿಂದ ಮೊಹರು ಮಾಡಿದ (Sealed) ಕೊಟೇಶನ್‌ಗಳನ್ನು ಕೆಳಕಂಡ ನಿಬಂಧನೆಗಳಿಗೆ ಒಳಪಟ್ಟು ಆಹ್ವಾನಿಸಲಾಗಿದೆ.

ಸದರಿ ಕಟ್ಟಡದ ಮಾಸಿಕ ಬಾಡಿಗೆಯನ್ನು ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು, ಲೋಕೋಪಯೋಗಿ ಇಲಾಖೆ, ಮುದ್ದೇಬಿಹಾಳ ಇವರು ನಿಗದಿಪಡಿಸಿ ಹಾಗೂ ಕಾರ್ಯನಿರ್ವಾಹಕ ಅಭಿಯಂತರರು, ಲೋಕೋಪಯೋಗಿ ಇಲಾಖೆ, ವಿಜಯಪುರ ಇವರು ಮೇಲುರುಜು ಮಾಡಿರುವಂತೆ ರೂ.6,105/- (ರೂಪಾಯಿ ಆರು ಸಾವಿರದ ನೂರೈದು ಮಾತ್ರ) ಅಥವಾ ಅದಕ್ಕಿಂತ ಹೆಚ್ಚಿನ ಮೊತ್ತವನ್ನು ಕೊಟೇಶನ್‌ನಲ್ಲಿ ನಮೂದಿಸಿ ಸಲ್ಲಿಸಬಹುದಾಗಿದೆ.

ನಿಬಂಧನೆಗಳು

1) ಕ್ಯಾಂಟೀನ್ ನಡೆಸುವ ಪರವಾನಿಗೆದಾರರು ಬಾಡಿಗೆಯನ್ನು ಪ್ರತಿ ತಿಂಗಳ 10 ನೇ ತಾರೀಖಿನೊಳಗಡೆ 5 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ವಿಜಯಪುರ (ಕಾರ್ಯಸ್ಥಳ: ಮುದ್ದೇಬಿಹಾಳ) ಅವರಿಗೆ ಪಾವತಿಸತಕ್ಕದ್ದು.

2) ಟೆಂಡರ್‌ನಲ್ಲಿ ಭಾಗವಹಿಸುವ ಪ್ರತಿಯೊಬ್ಬ ಅರ್ಜಿದಾರರು ರೂ.5,000/- (ರೂಪಾಯಿ ಐದು ಸಾವಿರ ಮಾತ್ರ) ಮೊತ್ತದ Earnest Money Deposit (EMD) ಅನ್ನು ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ವಿಜಯಪುರ ಇವರ ಹೆಸರಿನಲ್ಲಿ ಪಡೆದ ಡಿಮ್ಯಾಂಡ್ ಡ್ರಾಫ್ಟ್ (Demand Draft) ಮೂಲಕ ಪಾವತಿಸಿ, ಸದರಿ ಡಿಮ್ಯಾಂಡ್ ಡ್ರಾಫ್ಟ್‌ನ ಮೂಲ ಪ್ರತಿಯನ್ನು ತಮ್ಮ ಮೊಹರು ಮಾಡಿದ ಟೆಂಡರ್ ಕೊಟೇಶನ್‌ನೊಂದಿಗೆ ಕಡ್ಡಾಯವಾಗಿ ಲಗತ್ತಿಸಿ ಸಲ್ಲಿಸಬೇಕು. ಡಿಮ್ಯಾಂಡ್ ಡ್ರಾಫ್ಟ್ ಅನ್ನು ಲಗತ್ತಿಸದ ಟೆಂಡರ್‌ಗಳನ್ನು ಯಾವುದೇ ಕಾರಣಕ್ಕೂ ಪರಿಗಣಿಸಲಾಗುವುದಿಲ್ಲ. ಆಯ್ಕೆಯಾಗದ (ಅನುತ್ತೀರ್ಣ) ಟೆಂಡರ್‌ದಾರರಿಗೆ ಅವರು ಸಲ್ಲಿಸಿರುವ Earnest Money Deposit (EMD) ಮೊತ್ತವನ್ನು ಯಾವುದೇ ಬಡ್ಡಿಯಿಲ್ಲದೆ

ಹಿಂದಿರುಗಿಸಲಾಗುವುದು. ಆಯ್ಕೆಯಾದ ಟೆಂಡರ್‌ದಾರರ Earnest Money Deposit (EMD) ಮೊತ್ತವನ್ನು ಭದ್ರತಾ ಠೇವಣಿ (Security Deposit) ಮೊತ್ತಕ್ಕೆ ಹೊಂದಾಣಿಕೆ (Adjust) ಮಾಡಲಾಗುವುದು.

3) ಕ್ಯಾಂಟೀನ್‌ನ ಮಾಸಿಕ ಬಾಡಿಗೆಯನ್ನು ಪ್ರತಿ ವರ್ಷದ ಅಂತ್ಯದಲ್ಲಿ ಮುಂದಿನ ವರ್ಷಕ್ಕೆ ಶೇ.10 ರಷ್ಟು (10%) ಹೆಚ್ಚಳ ಮಾಡಲಾಗುವುದು. ಹೆಚ್ಚಳಗೊಂಡ ಬಾಡಿಗೆಯನ್ನು ಪರವಾನಿಗೆದಾರರು ಕಡ್ಡಾಯವಾಗಿ ಪಾವತಿಸತಕ್ಕದ್ದು.

4) ಗುತ್ತಿಗೆಯ ಅವಧಿ ಮುಕ್ತಾಯಗೊಂಡ ನಂತರ ಬಾಕಿ ಇರುವ ಬಾಡಿಗೆ, ವಿದ್ಯುತ್ ಶುಲ್ಕ, ನೀರಿನ ಶುಲ್ಕ ಹಾಗೂ ಇತರೆ ಬಾಕಿಗಳನ್ನು ಪಾವತಿಸಿ ಕಟ್ಟಡವನ್ನು ಸುಸ್ಥಿತಿಯಲ್ಲಿ ಖಾಲಿ ಮಾಡಿದ ಬಳಿಕ ಭದ್ರತಾ ಠೇವಣಿ ಮೊತ್ತವನ್ನು ಯಾವುದೇ ಬಡ್ಡಿ ನೀಡದೇ ನಿಯಮಾನುಸಾರ ಹಿಂದಿರುಗಿಸಲಾಗುವುದು.

5) ಕ್ಯಾಂಟೀನ್‌ನಲ್ಲಿ ತಯಾರಿಸಿ ಮಾರಾಟ ಮಾಡುವ ಆಹಾರ ಪದಾರ್ಥಗಳ ಪಟ್ಟಿ ಹಾಗೂ ಅವುಗಳ ದರಪಟ್ಟಿಯನ್ನು ಅರ್ಜಿಯೊಂದಿಗೆ ಲಗತ್ತಿಸತಕ್ಕದ್ದು.

6) ಹೋಟೆಲ್/ಕ್ಯಾಂಟೀನ್ ವ್ಯವಹಾರ ನಡೆಸಲು ಸಂಬಂಧಪಟ್ಟ ಪ್ರಾಧಿಕಾರದಿಂದ ಪಡೆದಿರುವ ಮಾನ್ಯ ಪರವಾನಿಗೆ (Licence) ಪ್ರಮಾಣಪತ್ರದ ಪ್ರತಿಯನ್ನು ಸಲ್ಲಿಸತಕ್ಕದ್ದು.

7) ಅರ್ಜಿದಾರರು ಇತ್ತೀಚಿನ ಎರಡು ಪಾಸ್‌ಪೋರ್ಟ್ ಅಳತೆಯ ಭಾವಚಿತ್ರಗಳನ್ನು ಅರ್ಜಿಯೊಂದಿಗೆ ಸಲ್ಲಿಸತಕ್ಕದ್ದು.

8) ವಿದ್ಯುತ್ ಶುಲ್ಕ, ನೀರಿನ ಶುಲ್ಕ ಹಾಗೂ ಕ್ಯಾಂಟೀನ್ ನಿರ್ವಹಣೆಗೆ ಸಂಬಂಧಿಸಿದ ಇತರೆ ಎಲ್ಲಾ ವೆಚ್ಚಗಳನ್ನು ಪರವಾನಿಗೆದಾರರೇ ಭರಿಸತಕ್ಕದ್ದು. ಕಸ ವಿಲೇವಾರಿ, ಸ್ವಚ್ಛತೆ ಹಾಗೂ ಹೊಸ ಸಂಪರ್ಕಗಳ ಅವಶ್ಯಕತೆ ಉಂಟಾದಲ್ಲಿ ಅದರ ವೆಚ್ಚವನ್ನೂ ಅವರೇ ಭರಿಸಬೇಕು.

9) ಕ್ಯಾಂಟೀನ್ ವ್ಯವಹಾರವನ್ನು ನ್ಯಾಯಾಲಯದ ಕೆಲಸದ ದಿನಗಳಲ್ಲಿ ಬೆಳಿಗ್ಗೆ 6.00 ಘಂಟೆಯಿಂದ ಸಂಜೆ 6.30 ಘಂಟೆಯವರೆಗೆ ಮಾತ್ರ ನಡೆಸತಕ್ಕದ್ದು.

10) ಈಗಿರುವ ಕ್ಯಾಂಟೀನ್ ಕಟ್ಟಡದಲ್ಲಿ ಯಾವುದೇ ಬದಲಾವಣೆ ಅಥವಾ ಮಾರ್ಪಾಡು ಮಾಡತಕ್ಕದ್ದಲ್ಲ. ಅನಿವಾರ್ಯವಾದಲ್ಲಿ ಸಂಬಂಧಪಟ್ಟ ಪ್ರಾಧಿಕಾರದಿಂದ ಪೂರ್ವಾನುಮತಿ ಪಡೆಯತಕ್ಕದ್ದು. ಪೂರ್ವಾನುಮತಿ ಪಡೆಯದೇ ಮಾರ್ಪಾಡು ಮಾಡಿದಲ್ಲಿ ಗುತ್ತಿಗೆಯನ್ನು ರದ್ದುಪಡಿಸಿ ಕಾನೂನು ಕ್ರಮ ಕೈಗೊಳ್ಳಲಾಗುವುದು.

11) ಕೊಟೇಶನ್‌ಗಳನ್ನು ***"ಮಾನ್ಯ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ವಿಜಯಪುರ"*** ಇವರ ಹೆಸರಿನಲ್ಲಿ ಮೊಹರು ಮಾಡಿದ ಲಕೋಟೆಯಲ್ಲಿ ಸಲ್ಲಿಸತಕ್ಕದ್ದು. ಲಕೋಟೆಯ ಮೇಲೆ ***"ಮುದ್ದೇಬಿಹಾಳ ನ್ಯಾಯಾಲಯ ಕ್ಯಾಂಟೀನ್ ನಡೆಸುವ ಕುರಿತು ಟೆಂಡರ್"*** ಎಂದು ಸ್ಪಷ್ಟವಾಗಿ ನಮೂದಿಸಬೇಕು.

12) ಮೊಹರು ಮಾಡಿದ ಲಕೋಟೆಯನ್ನು ದಿನಾಂಕ: 25-09-2026 ರಂದು ಸಂಜೆ 5.00 ಘಂಟೆಯೊಳಗಾಗಿ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ವಿಜಯಪುರ, ಜಿಲ್ಲಾ ನ್ಯಾಯಾಲಯಗಳ ಸಂಕೀರ್ಣ, ಬಾಗಲಕೋಟೆ ರೋಡ, ವಿಜಯಪುರ ಅವರ ಕಚೇರಿಗೆ ತಲುಪಿಸತಕ್ಕದ್ದು.

13) ಸ್ವೀಕೃತವಾದ ಟೆಂಡರ್‌ಗಳನ್ನು ದಿನಾಂಕ: 25-09-2026 ರಂದು ಸಂಜೆ 5.30 ಘಂಟೆಗೆ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ವಿಜಯಪುರ ಅವರ ಸಮಕ್ಷಮದಲ್ಲಿ ತೆರೆಯಲಾಗುವುದು. ಹೆಚ್ಚಿನ ಬಾಡಿಗೆಯನ್ನು ಸೂಚಿಸಿದ ಅರ್ಹ ಕೊಟೇಶನ್‌ಗಳಿಗೆ ಆದ್ಯತೆ ನೀಡಲಾಗುವುದು. ಅಂತಿಮ ನಿರ್ಧಾರ ಕೈಗೊಳ್ಳುವ ಅಧಿಕಾರ ಪ್ರಾಧಿಕಾರಕ್ಕೆ ಸೇರಿರುತ್ತದೆ.

14) ಪರವಾನಗಿ ಅವಧಿ ಪೂರ್ಣಗೊಳ್ಳದಿದ್ದರೂ ಆಡಳಿತಾತ್ಮಕ ಕಾರಣಗಳಿಂದ ಕಟ್ಟಡವನ್ನು ಖಾಲಿ ಮಾಡುವಂತೆ ನೋಟಿಸ್ ನೀಡಿದಲ್ಲಿ, ಪರವಾನಿಗೆದಾರರು 15 ದಿನಗಳೊಳಗಾಗಿ ಯಾವುದೇ ತಕರಾರು ಇಲ್ಲದೆ ಕಟ್ಟಡವನ್ನು ಖಾಲಿ ಮಾಡಿ ಹಸ್ತಾಂತರಿಸತಕ್ಕದ್ದು. ಈ ಸಂಬಂಧ ಯಾವುದೇ ಪರಿಹಾರಕ್ಕೆ ಅವರು ಅರ್ಹರಾಗಿರುವುದಿಲ್ಲ.

15) ಸದರಿ ಕಟ್ಟಡವನ್ನು ಕ್ಯಾಂಟೀನ್ ನಡೆಸುವ ಉದ್ದೇಶಕ್ಕೆ ಮಾತ್ರ ಬಳಸತಕ್ಕದ್ದು. ಬೇರೆ ಯಾವುದೇ ಉದ್ದೇಶಕ್ಕೆ ಬಳಸಿದುದು ಕಂಡುಬಂದಲ್ಲಿ ಗುತ್ತಿಗೆಯನ್ನು ರದ್ದುಪಡಿಸಲಾಗುವುದು.

16) ಪರವಾನಿಗೆದಾರರು ನ್ಯಾಯಾಲಯದ ಕಾರ್ಯಚಟುವಟಿಕೆಗಳಿಗೆ, ನ್ಯಾಯಾಧೀಶರಿಗೆ, ಸಿಬ್ಬಂದಿಗೆ, ನ್ಯಾಯವಾದಿಗಳಿಗೆ ಹಾಗೂ ಕಕ್ಷಿದಾರರಿಗೆ ಯಾವುದೇ ರೀತಿಯ ತೊಂದರೆಯಾಗದಂತೆ ನೋಡಿಕೊಳ್ಳತಕ್ಕದ್ದು.

17) ಕ್ಯಾಂಟೀನ್ ಕಟ್ಟಡದಲ್ಲಿ ಜೀವ ಹಾಗೂ ಆಸ್ತಿಗೆ ಅಪಾಯಕಾರಿಯಾದ ಯಾವುದೇ ವಸ್ತುಗಳನ್ನು ಸಂಗ್ರಹಿಸಿಡತಕ್ಕದ್ದಲ್ಲ.

18) ಕ್ಯಾಂಟೀನ್ ಕಟ್ಟಡ ಹಾಗೂ ಅದರ ಸುತ್ತಮುತ್ತಲಿನ ಪ್ರದೇಶವನ್ನು ಯಾವಾಗಲೂ ಸ್ವಚ್ಛ ಹಾಗೂ ಆರೋಗ್ಯಕರವಾಗಿ ನಿರ್ವಹಿಸತಕ್ಕದ್ದು.

19) ಸದರಿ ಕಟ್ಟಡವನ್ನು ಉಪಬಾಡಿಗೆ (Sub-Lease) ಆಧಾರದ ಮೇಲೆ ಯಾವುದೇ ವ್ಯಕ್ತಿಗೆ ಅಥವಾ ಸಂಸ್ಥೆಗೆ ನೀಡತಕ್ಕದ್ದಲ್ಲ.

20) ಆಯ್ಕೆಯಾದ ಅರ್ಜಿದಾರರು ಈ ನಿಬಂಧನೆಗಳಿಗೆ ಅನುಗುಣವಾಗಿ ನ್ಯಾಯಾಲಯದೊಂದಿಗೆ ಒಪ್ಪಂದ ಪತ್ರವನ್ನು ಮಾಡಿಕೊಳ್ಳತಕ್ಕದ್ದು.

21) ಕ್ಯಾಂಟೀನ್ ನಡೆಸುವ ಗುತ್ತಿಗೆಯ ಅವಧಿಯು ಮೂರು (3) ವರ್ಷಗಳವರೆಗೆ ಮಾತ್ರ ಇರುತ್ತದೆ.

22) ಗುತ್ತಿಗೆಯ ಅವಧಿ ಮುಕ್ತಾಯವಾಗುವ ದಿನಾಂಕದಿಂದ 15 ದಿನಗಳೊಳಗಾಗಿ ಕಟ್ಟಡವನ್ನು ಖಾಲಿ ಮಾಡಿ ನ್ಯಾಯಾಲಯದ ವಶಕ್ಕೆ ಒಪ್ಪಿಸತಕ್ಕದ್ದು.

ಪ್ರಮುಖ ದಿನಾಂಕಗಳು

ಟೆಂಡರ್ ಸಲ್ಲಿಸುವ ಕೊನೆಯ ದಿನಾಂಕ: 25-09-2026 ಸಂಜೆ 5.00 ಘಂಟೆ.

ಟೆಂಡರ್ ತೆರೆಯುವ ದಿನಾಂಕ ಮತ್ತು ಸಮಯ: 25-09-2026 ಸಂಜೆ 5.30 ಘಂಟೆ.

ಸ್ವೀಕೃತವಾದ ಟೆಂಡರ್‌ಗಳನ್ನು ಮಾನ್ಯ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ವಿಜಯಪುರ ಅವರ ಕಚೇರಿಯಲ್ಲಿ ಅರ್ಜಿದಾರರ ಸಮಕ್ಷಮದಲ್ಲಿ ತೆರೆಯಲಾಗುವುದು.

ಈ ಕೆಳಗೆ ಸಹಿ ಮಾಡಿದವರು ಯಾವುದೇ ಕಾರಣ ನೀಡದೆ ಟೆಂಡರ್‌ಗಳನ್ನು ಸ್ವೀಕರಿಸುವ ಅಥವಾ ತಿರಸ್ಕರಿಸುವ ಸಂಪೂರ್ಣ ಹಕ್ಕನ್ನು ಹೊಂದಿರುತ್ತಾರೆ.

ಟೆಂಡರ್ ಕುರಿತು ಹೆಚ್ಚಿನ ಮಾಹಿತಿಗಾಗಿ ಕಚೇರಿ ವೇಳೆಯಲ್ಲಿ ಜಿಲ್ಲಾ ನ್ಯಾಯಾಲಯ, ವಿಜಯಪುರದ ಮುಖ್ಯ ಆಡಳಿತಾಧಿಕಾರಿಗಳನ್ನು ಸಂಪರ್ಕಿಸಬಹುದು.

10/09/2026.

(ಹರೀಶ ಎ.)

ವಿಜಯಪುರ.

ದಿನಾಂಕ: 10/09/2026.

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ವಿಜಯಪುರ
ಹಾಗೂ ಟೆಂಡರ್ ಬುಲೆಟಿನ್ ಅಧಿಕಾರಿಗಳು

ಪ್ರತಿಯನ್ನು ಮಾಹಿತಿಗಾಗಿ ಹಾಗೂ ವ್ಯಾಪಕ ಪ್ರಚಾರಕ್ಕಾಗಿ ಕಚೇರಿಯ ಸೂಚನಾ ಫಲಕ ಕ್ಕೆ ಪ್ರಕಟಿಸುವ ಕುರಿತುಃ

1) ಮಾನ್ಯ ಜಿಲ್ಲಾಧಿಕಾರಿಗಳು, ವಿಜಯಪುರ.
2) ಮಾನ್ಯ ಕಾರ್ಯನಿರ್ವಾಹಕ ಅಭಿಯಂತರರು, ಲೋಕೋಪಯೋಗಿ ಇಲಾಖೆ, ವಿಜಯಪುರ.
3) ಮಾನ್ಯ ಸಹಾಯಕ ಅಭಿಯಂತರರು, ಲೋಕೋಪಯೋಗಿ ಇಲಾಖೆ,ಮುದ್ದೇಬಿಹಾಳ.
4) ಮಾನ್ಯ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು, ಜಿಲ್ಲಾ ಪಂಚಾಯತ್ ವಿಜಯಪುರ.
5) ಮಾನ್ಯ ತಹಶೀಲ್ದಾರರು, ಮುದ್ದೇಬಿಹಾಳ ಹಾಗೂ ತಾಳೀಕೋಟಿ.
6) ಮಾನ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ತಾಲೂಕ ಪಂಚಾಯತ, ಮುದ್ದೇಬಿಹಾಳ.
7) ಮಾನ್ಯ ಮುಖ್ಯ ಅಧಿಕಾರಿಗಳು, ಪುರಸಭೆ, ಮುದ್ದೇಬಿಹಾಳ.
8) ಮಾನ್ಯ ಡಿಪೋ ಮ್ಯಾನೇಜರ್, ಕೆಎಸ್ಆರಟಿಸಿ ಮುದ್ದೇಬಿಹಾಳ ಘಟಕ, ಮುದ್ದೇಬಿಹಾಳ.
9) ಜಿಲ್ಲಾ ವಾರ್ತಾಧಿಕಾರಿಗಳು, ವಾರ್ತಾ ಮತ್ತು ಪ್ರಸರಣ ಇಲಾಖೆ ವಿಜಯಪುರ ರವರಿಗೆ ಪತ್ರಿಕಾ ಪ್ರಕಟಣೆಯ ಕುರಿತು.
10) ಮಾನ್ಯ ಅಧ್ಯಕ್ಷರು, ವಕೀಲರ ಸಂಘ, ಮುದ್ದೇಬಿಹಾಳ.
11) ಮುದ್ದೇಬಿಹಾಳದ 5 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ವಿಜಯಪುರ (ಕಾರ್ಯಸ್ಥಳ ಮುದ್ದೇಬಿಹಾಳದಲ್ಲಿ), ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಜೆಎಂಎಫ್‌ಸಿ ನ್ಯಾಯಾಲಯ ಹಾಗೂ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ನ್ಯಾಯಾಲಯದ ಸೂಚನಾ ಫಲಕಕ್ಕೆ
12) ಸಂಚಾರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ನ್ಯಾಯಾಲಯ, ತಾಳೀಕೋಟಿ ನ್ಯಾಯಾಲಯದ ಸೂಚನಾ ಫಲಕಕ್ಕೆ
13) ವಿಜಯಪುರ ಜಿಲ್ಲಾ ನ್ಯಾಯಾಲಯದ ಸೂಚನಾ ಫಲಕಕ್ಕೆ
14) ಲೆಕ್ಕ ಪತ್ರ ಶಾಖೆ, ಜಿಲ್ಲಾ ನ್ಯಾಯಾಲಯ, ವಿಜಯಪುರ.
15) ಕಛೇರಿ ಪ್ರತಿ.

Ou.no. 10879/26

ಆದೇಶದ ಮೇರೆಗೆ,

ಮುಖ್ಯ ಆಡಳಿತಾಧಿಕಾರಿಗಳು,
ಜಿಲ್ಲಾ ನ್ಯಾಯಾಲಯ, ವಿಜಯಪುರ.

ANNEXURE-I

To,
The Hon'ble Principal District & Sessions Judge,
VIJAYAPURA.

Sir,

Sub: Submission of Tender for running the canteen...reg.
Ref: Tender Notification dated: 04.06.2026.

* * *

I/We, the undersigned, hereby apply for the tender for running a Canteen in Muddebihal Court premises as per terms and conditions prescribed by the Hon'ble Principal District & Sessions Judge, Vijayapura and also agree to execute the agreement.

1.	Name (In Block Letter)		
2.	Full Address		
	i)	Telephone Number	
	ii)	Mobile Number	
	iii)	E-mail ID	
3.	Demand Draft No., Date and amount towards EMD.		
4.	Whether the Firm/Individual listed previously.		
5.	License fee quoted to be payable per month.		

6.	Statutory details (Photocopy to be attached)		
	a)	Registration Number of the firm.	
	b)	PAN Number	
	c)	GST Registration Number	
	d)	TIN Number	

Place:

Date: Name & Signature of the Tenderer

(With seal)

ANNEXURE - II

(PROPOSED PRICE LIST OF EATABLES)

Sl. No.	Name of the Item.	Quantity (ml/grams) & Rate		
		Quantity	Rate	
			Rs.	Ps.

Place:

Date:

Name & Signature of the Tenderer

(With seal)